ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/07/2016

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ: 16.01.2016.

## ಅಧಿಸೂಚನೆ

ವಿಷಯ:- 2016ನೇ ಸಾಲಿನಲ್ಲಿ ಪದಾವಧಿ ಮುಗಿಯಲಿರುವ ಮಾಧ್ಯಮಿಕ/ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸಲು ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ:-
1. ಸಹಕಾರ ಚುನಾವಣಾ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: ಸಚುಅ/ಚುನಾವಣೆ/ಜನವರಿ-ಜೂನ್/01/2016 ದಿನಾಂಕ: 18.12.2015
2. ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಅ/ಚುಅನೇ/03/2016 ದಿನಾಂಕ: 18.12.2015
3. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಮಾಸಂ/04/2016 ದಿನಾಂಕ: 16.01.2016.
4. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಫೆಸಂ/05/2016 ದಿನಾಂಕ: 16.01.2016.
5. ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ: ಸಚುಪ್ರಾ/ಚುಅನೇ/ಅಪೆಕ್ಸ್‌ಸಂ/06/2016 ದಿನಾಂಕ: 16.01.2016.

★★★

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39-ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26-ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39-ಎ(2) ರೀತ್ಯಾ ಪ್ರಾಥಮಿಕ, ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘ/ಸಹಕಾರಿಗಳಿಗೆ ನಾಲ್ಕು ಹಂತದಲ್ಲಿ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಪ್ರಾಧಿಕಾರವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿರುತ್ತದೆ. ಅಧಿನಿಯಮ ಪ್ರಕರಣ 39-ಎಎ(15)(ಎ)ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 4 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟವರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಪ್ರಾಧಿಕಾರಕ್ಕೆ/ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳು/ಸಹಕಾರಿಗಳದ್ದಾಗಿರುತ್ತದೆ.

ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ-39ಎ(2) ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26 ಮತ್ತು 26ಎ ರೀತ್ಯಾ ಹಾಗೂ ಸರ್ಕಾರದ ಇತ್ತೀಚಿನ ತಿದ್ದುಪಡಿಯಂತೆ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗಳ ಸದಸ್ಯರ/ಪದಾಧಿಕಾರಿಗಳ ಸಾಮಾನ್ಯ ಚುನಾವಣೆಗಳನ್ನು 4 ಹಂತಗಳಲ್ಲಿ ನಡೆಸತಕ್ಕದ್ದಾಗಿದೆ.

- ಅಧಿನಿಯಮ ಪ್ರಕರಣ-39ಎ(2)(ಎ) ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ-39ಎ(2)(ಬಿ) ರೀತ್ಯಾ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ ಪ್ರಕರಣ-39ಎ(2)(ಸಿ) ರೀತ್ಯಾ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.
- ಅಧಿನಿಯಮ-39ಎ(2)(ಡಿ) ರೀತ್ಯಾ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 39ಎ ಅವಕಾಶದಂತೆ, ಮೊದಲ ಹಂತದಲ್ಲಿ 2016ನೇ ಜನವರಿ ಇಂದ ಜೂನ್‌ವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳಿಗೆ/ಪದಾಧಿಕಾರಿಗಳಿಗೆ ಚುನಾವಣೆಗಳನ್ನು ನಡೆಸಲು ಉಲ್ಲೇಖ(2)ರ ಆದೇಶದಲ್ಲಿ ಚುನಾವಣಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. ದಿನಾಂಕ 30.06.2016 ರವರೆಗೆ ಆಡಳಿತ ಮಂಡಲಿ ಪದಾವಧಿ ಮುಗಿಯಲಿರುವ ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿ ದಿನಾಂಕ 18.12.2015 ರಂದು ಉಲ್ಲೇಖ(1)ರ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯನ್ನು, ಮೂರನೇ ಹಂತದಲ್ಲಿ ಫೆಡರಲ್ ಹಾಗೂ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ನಡೆಸತಕ್ಕದ್ದಾಗಿದೆ. ಪ್ರತಿ ಹಂತದ ಚುನಾವಣೆಗಳನ್ನು ನಿಯಮಾನುಸಾರ ನಡೆಸತಕ್ಕದ್ದಾಗಿದೆ. ಪ್ರಾಥಮಿಕ ಹಂತದ ಚುನಾವಣೆಯ ನಂತರ ಮಾಧ್ಯಮಿಕ ಮತ್ತು ಫೆಡರಲ್ ಸಂಘಗಳಿಗೆ ಪ್ರತಿನಿಧಿಗಳನ್ನು ಕಳುಹಿಸಬೇಕಾಗಿರುತ್ತದೆ. ಪ್ರತಿನಿಧಿಗಳನ್ನು ಕಳುಹಿಸಲು ಮತ್ತು ಚುನಾವಣೆಯನ್ನು ನಿಯಮಾನುಸಾರ ನಡೆಸಲು ನಿಗದಿತ ಕಾಲಾವಕಾಶವು ಬೇಕಾಗಿರುತ್ತದೆ. ಅದರಂತೆ ದಿನಾಂಕಗಳನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದಾಗಿದೆ.

ಅದರಂತೆ ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(3)ರಲ್ಲಿ ಕಾಣಿಸಿರುವ ಆದೇಶದಲ್ಲಿ **ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರನ್ನು ಮಾಧ್ಯಮಿಕ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯತಕ್ಕದ್ದಾಗಿದೆ.

ನಂತರ ಮೂರನೇ ಹಂತದಲ್ಲಿ ಫೆಡರಲ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(4)ರ ಆದೇಶದಲ್ಲಿ **ರಾಜ್ಯದ ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳನ್ನು ಫೆಡರಲ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಈಗಾಗಲೇ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿಯ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯುವುದು.

ಅದೇ ರೀತಿಯಲ್ಲಿ ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 2(ಐ-1)ರ ಅವಕಾಶದಂತೆ ಚುನಾವಣಾಧಿಕಾರಿಗಳನ್ನು ಪ್ರಾಧಿಕಾರದಿಂದ ನೇಮಕಾತಿ ಮಾಡಬೇಕಾಗಿದ್ದು, ಅಪೆಕ್ಸ್ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಉಲ್ಲೇಖ(5)ರ ಆದೇಶದಲ್ಲಿ **ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳನ್ನು (Regional Commissioners)ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಿ ಆದೇಶಿಸಲಾಗಿದೆ.** ಚುನಾವಣಾಧಿಕಾರಿಗಳು ಅವರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಸಹಾಯಕ ಚುನಾವಣಾಧಿಕಾರಿಗಳ ನೇಮಕಾತಿಯ ಅವಶ್ಯಕತೆ ಇದ್ದಲ್ಲಿ ಸೂಕ್ತ ಅಧಿಕಾರಿ ಹೆಸರು ಮತ್ತು ಪದನಾಮವನ್ನು ತಿಳಿಸಿ ಪ್ರಾಧಿಕಾರದಿಂದ ನೇಮಕಾತಿ ಆದೇಶ ಪಡೆಯುವುದು.

ಮೇಲಿನ ಕಂಡಿಕೆಗಳಲ್ಲಿ ಕ್ರಮವಾಗಿ ವಿವರಿಸಿರುವಂತೆ ಚುನಾವಣಾಧಿಕಾರಿಗಳು ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಕೆಳಕಂಡ ದಿನಾಂಕಗಳನ್ನು ಗೊತ್ತುಪಡಿಸಿ ಅಧಿಸೂಚನೆ ಹೊರಡಿಸಿ ಸದರಿ ದಿನಾಂಕಗಳಲ್ಲಿ ಆಡಳಿತ ಮಂಡಲಿಗಳ ಚುನಾವಣೆಯನ್ನು ನಿಯಮಾನುಸಾರ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಆದೇಶಿಸಿದೆ. ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಚುನಾವಣೆಗಳನ್ನು ನಿಯಮಾನುಸಾರ ಪಾರದರ್ಶಕವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳ ಬಗ್ಗೆ ಮತ್ತು ಅನುಬಂಧ-2ರ (ಚೆಕ್‌ಲಿಸ್ಟ್)ನಲ್ಲಿ ಚುನಾವಣಾಧಿಕಾರಿಗಳು ಚುನಾವಣೆ ನಡೆಸಲು ಅಗತ್ಯ ಕ್ರಮವಿಡುವ ಬಗ್ಗೆ ತಿಳಿಸಲಾಗಿದೆ.

| ಕ್ರ. ಸಂ. | ಸಹಕಾರ ಸಂಘಗಳ ವರ್ಗ | ಚುನಾವಣೆ ನಡೆಸಲು ಗೊತ್ತುಪಡಿಸಿದ ದಿನಾಂಕ / ಅವಧಿ |
|---|---|---|
| 01 | ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ-39ಎ(2)(ಬಿ) ರೀತ್ಯಾ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26ಎ ರೀತ್ಯಾ ಎರಡನೇ ಹಂತದಲ್ಲಿ ಬಿಡಿ ವ್ಯಕ್ತಿಗಳ ಸದಸ್ಯತ್ವ ಮತ್ತು ಬೇರೊಂದು ಸಹಕಾರ ಸಂಘಗಳ ಸದಸ್ಯತ್ವ ಪಡೆಯಲು ಅವಕಾಶವಿರುವ ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು. | ದಿನಾಂಕ 30.05.2016 ಮತ್ತು 31.05.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 02 | ಸಹಕಾರ ಸಂಘಗಳ ಅಧಿನಿಯಮ 1959 ಅಧಿನಿಯಮ ಪ್ರಕರಣ-39ಎ(2)(ಸಿ) ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ-26(ಎ) ರೀತ್ಯಾ 3ನೇ ಹಂತದ ಫೆಡರಲ್ ಸಹಕಾರ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.<br>(ಎ) ಪ್ರಾಥಮಿಕ ಸಹಕಾರ ಸಂಘಗಳು /ಸಹಕಾರಿಗಳು ಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿರುವ ಫೆಡರಲ್ ಸಹಕಾರ ಸಂಘಗಳು / ಒಕ್ಕೂಟ ಸಹಕಾರಿಗಳು<br>(ಬಿ) ಎಲ್ಲಾ ವರ್ಗದ ಸಹಕಾರ ಸಂಘಗಳು /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ ಸಹಕಾರ ಸಂಘಗಳು/ಒಕ್ಕೂಟ ಸಹಕಾರಿಗಳು | ದಿನಾಂಕ 30.07.2016 ಮತ್ತು 31.07.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 03 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 39ಎ(2)(ಡಿ), ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26ಎ ರೀತ್ಯಾ ನಾಲ್ಕನೇ ಹಂತದ ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.<br>(ಎ)ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ ಪ್ರಾಥಮಿಕ ಸಹಕಾರ ಸಂಘಗಳ /ಸಹಕಾರಿಗಳ ಸದಸ್ಯತ್ವ ಹೊಂದಿರುವ ಫೆಡರಲ್ (ಅಪೆಕ್ಸ್) ಸಂಘಗಳು/ಒಕ್ಕೂಟ ಸಹಕಾರಿಗಳು<br>(ಬಿ)ರಾಜ್ಯಾದ್ಯಂತ ಕಾರ್ಯವ್ಯಾಪ್ತಿ ಹೊಂದಿರುವ – ಅಪೆಕ್ಸ್ ಸಹಕಾರ ಸಂಘಗಳು / ಸಹಕಾರಿಗಳು | ದಿನಾಂಕ 28.09.2016 ಮತ್ತು 29.09.2016ರ ಅವಧಿಯಲ್ಲಿ ಚುನಾವಣಾಧಿಕಾರಿಗಳು ಸೂಕ್ತವೆನಿಸಿದ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

--4

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಇ ಮತ್ತು ಸಹಕಾರಿ ನಿಯಮ 5ಸಿ ರಂತೆ ಪ್ರಾಧಿಕಾರದಿಂದ ನೇಮಕಾತಿಮಾಡಲ್ಪಟ್ಟ ಚುನಾವಣಾಧಿಕಾರಿಗಳು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ ಆಕಸ್ಮಿಕವಾಗಿ ತೆರವಾದ ಮತ್ತು ಆಡಳಿತಗಾರ /ವಿಶೇಷಾಧಿಕಾರಿ ನೇಮಕಗೊಂಡ ಸಂಘ/ಸಹಕಾರಿಗಳ ಚುನಾವಣೆಗಳನ್ನು ನಡೆಸಲು ಸೂಕ್ತ ರಿಟರ್ನಿಂಗ್ ಅಧಿಕಾರಿ ಮತ್ತು ಅವಶ್ಯಕತೆಗನುಗುಣವಾಗಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಹೆಸರುಗಳನ್ನು Randomization ಕ್ರಮ ಅನುಸರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿ, ಪ್ರಾಧಿಕಾರದಿಂದ ನೇಮಕಾತಿ ಆದೇಶಗಳನ್ನು ಪಡೆದು ಅನುಬಂಧ-1 ಮತ್ತು ಅನುಬಂಧ-2ರ ಮಾರ್ಗಸೂಚಿಗಳಂತೆ ಚುನಾವಣೆಗಳನ್ನು ನಿಯಮಾನುಸಾರ ಪಾರದರ್ಶಕವಾಗಿ ನಡೆಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

<u>ಇವರಿಗೆ:</u>

1. ಪ್ರಾದೇಶಿಕ ಆಯುಕ್ತರು (**Regional Commissioners**) (..................................................) ಹಾಗೂ ಚುನಾವಣಾಧಿಕಾರಿಗಳು (**ಅಪೆಕ್ಸ್ ಸಹಕಾರ ಸಂಘಗಳು**).
2. ಜಿಲ್ಲಾಧಿಕಾರಿಗಳು,...................................................ಜಿಲ್ಲೆ ಹಾಗೂ ಚುನಾವಣಾಧಿಕಾರಿಗಳು (**ಫೆಡರಲ್ ಸಹಕಾರ ಸಂಘಗಳು**).
3. ಸಹಕಾರ ಸಂಘಗಳ ಜಂಟಿನಿಬಂಧಕರು..............................ಪ್ರಾಂತ,.......................................ಜಿಲ್ಲೆ ಹಾಗೂ ಚುನಾವಣಾಧಿಕಾರಿಗಳು (**ಮಾಧ್ಯಮಿಕ ಸಹಕಾರ ಸಂಘಗಳು**).

<u>ಪ್ರತಿಗಳು:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಅಂತಸ್ತುಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು.
2. ಸಹಕಾರ ಸಂಘಗಳ ನಿಬಂಧಕರು, ನಂ.1,ಆಲಿಆಸ್ಕರ್ ರಸ್ತೆ, ಕರ್ನಾಟಕ ರಾಜ್ಯ, ಬೆಂಗಳೂರು.
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರಿಗೆ.
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ.
5. ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಭೂ ಅಭಿವೃದ್ಧಿ ಅಧಿಕಾರಿ, ಕಾಡಾ, ಕಲಬುರಗಿ,
6. ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಭೂ ಅಭಿವೃದ್ಧಿ ಅಧಿಕಾರಿ, ಕಾಡಾ, ಬೆಳಗಾವಿ,
7. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ.
8. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
9. ರಕ್ಷಕಡತ / ಕಛೇರಿ ಪ್ರತಿ.

--5

ಅನುಬಂಧ-1

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/07/2016 ದಿನಾಂಕ: 16.01.2016

**ಚುನಾವಣಾಧಿಕಾರಿಗಳು ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಕಾನೂನಿಗೆ ಅನುಗುಣವಾಗಿ ನಡೆಸುವ ಬಗ್ಗೆ ಅನುಸರಿಸಬೇಕಾದ ಮಾರ್ಗಸೂಚಿಗಳು.**

01. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-13ಡಿ(2)ರ ಅವಕಾಶದಂತೆ ಸಹಕಾರ ಚುನಾವಣಾ ಪ್ರಾಧಿಕಾರವು ಚುನಾವಣಾಧಿಕಾರಿಗಳಿಂದ ಸಾಮಾನ್ಯ ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರ ಸಂಘಗಳ ಪಟ್ಟಿಯನ್ನೊಳಗೊಂಡ ಅಂದರೆ ಚುನಾವಣಾಧಿಕಾರಿಗಳಿಂದ ಅಂತಹ ವರದಿಗಳು ಸ್ವೀಕೃತವಾದ ನಂತರ, ಜಿಲ್ಲೆಯೊಳಗಿನ ಪ್ರತಿ ಸಂಘದ ಹೆಸರು / ಅಂಚೆ ವಿಳಾಸ ಹಾಗೂ ಸಾಮಾನ್ಯ ಚುನಾವಣೆಯ ದಿನಾಂಕ ಮತ್ತು ಸ್ಥಳಗಳನ್ನು ತಿಳಿಸುವ, ಆಡಳಿತ ಮಂಡಲಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸುವ ಮತ್ತು ಮತದಾರರ ಪಟ್ಟಿಗಳನ್ನು ತಯಾರಿಸುವ ಸಂಬಂಧದಲ್ಲಿ ವೇಳಾಪಟ್ಟಿಗಳನ್ನು ಪ್ರಕಟಿಸತಕ್ಕದ್ದಾಗಿರುತ್ತದೆ.

02. ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ-21ರ ಉಪಕಲಂ (2)ರ ಖಂಡ (ಎ)ಅಡಿ ಪರಂತುಕದ ಪ್ರಕಾರ ಒಂದು ಸಹಕಾರ ಸಂಘಕ್ಕೆ ಹೊಸ [ಮಂಡಲಿ]ಯು ಆಯ್ಕೆಯಾದಲ್ಲಿ ಹಾಗೆ ಹೊಸದಾಗಿ ಆಯ್ಕೆಯಾದ [ಮಂಡಲಿ]ಯು, ಸಂಘದ ಸದಸ್ಯತ್ವ ಹೊಂದಿರುವ ಯಾವುದೇ ಇತರ ಸಹಕಾರ ಸಂಘಕ್ಕೆ ಡೆಲಿಗೇಟನನ್ನು ಅಥವಾ ನಾಮಿನಿಯನ್ನು ಕಳುಹಿಸತಕ್ಕದ್ದು ಎಂದಿರುತ್ತದೆ. ಇದರ ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘದ ಚುನಾವಣೆ ಮುಗಿದು ಅದು ಡೆಲಿಗೇಟನನ್ನು ಕಳುಹಿಸಿದ ನಂತರವೇ ಆ ಸಂಘವು ಸದಸ್ಯತ್ವ ಪಡೆದಿರುವ ಮಾಧ್ಯಮಿಕ ಸಂಘ ಅಥವಾ ಫೆಡೆರಲ್ ಸಂಘದ ಮತದಾರರ ಕರಡುಪಟ್ಟಿ ನಂತರ ಅಂತಿಮ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಲು ಸಾಧ್ಯವಾಗುತ್ತದೆ. ಹಾಗೆಯೇ, ಒಂದು ಅಪೆಕ್ಸ್ ಸಹಕಾರ ಸಂಘದ ಮತದಾರರ ಪಟ್ಟಿಯನ್ನು ಅದಕ್ಕೆ ಸಂಯೋಜಿತವಾಗಿರುವ ಚುನಾವಣೆಗೆ ಬಾಕಿ ಇರುವ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದು ಅವುಗಳು ಡೆಲಿಗೇಟನನ್ನು ಕಳುಹಿಸುವವರೆಗೆ ಮತದಾರರ ಪಟ್ಟಿ ತಯಾರಿಸಲು ಪ್ರಕಟಿಸಲು ಬರುವುದಿಲ್ಲ. ಪರಿಣಾಮವಾಗಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರವೇ ಮಾಧ್ಯಮಿಕ ಅಥವಾ ಫೆಡರಲ್ /ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿರುತ್ತದೆ. ಹಾಗೆಯೇ ಫೆಡರಲ್ ಸಹಕಾರ ಸಂಘಗಳ ಚುನಾವಣೆ ಮುಗಿದ ನಂತರ ಅಪೆಕ್ಸ್ ಸಂಘಗಳ ಚುನಾವಣೆ ನಡೆಸತಕ್ಕದ್ದಾಗಿದೆ.

03. ಸಹಕಾರ ಸಂಘಗಳ ಅಧಿನಿಯಮ 1959 ಕಲಂ-28ಬಿ ರೀತ್ಯಾ ಹೊಸದಾಗಿ ಚುನಾಯಿತರಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ.

04. ಚುನಾವಣೆಗಳನ್ನು ನಡೆಸುವುದಕ್ಕಾಗಿ ಮತ್ತು ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳು / ಸಹಕಾರಿಗಳು ಭರಿಸತಕ್ಕದ್ದು.

05. ಪದಾವಧಿಯು ಮುಗಿದ ಸಹಕಾರ ಸಂಘಗಳು / ಸಹಕಾರಿಗಳು ನಿಯಮಾನುಸಾರ ಪೂರ್ವಭಾವಿಯಾಗಿ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮತ್ತು ಚುನಾವಣಾಧಿಕಾರಿಗಳಿಗೆ ವಿವರಗಳನ್ನು ನಿಯಮ 13ಡಿ(1)ರಲ್ಲಿ ಸಲ್ಲಿಸತಕ್ಕದ್ದು. ಸಹಕಾರ ಚುನಾವಣಾ ಪ್ರಾಧಿಕಾರ ಮತ್ತು ಚುನಾವಣಾಧಿಕಾರಿಗಳು ಸರಿಯಾದ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ಸೂಕ್ತ ರೀತಿಯಲ್ಲಿ ನಡೆಸುವುದಕ್ಕೆ ಸಂಬಂಧಿಸಿದ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಹಾಗೂ ಮುಖ್ಯಕಾರ್ಯನಿರ್ವಾಹಕರು ಅವಶ್ಯವಾದ ದಾಖಲಾತಿಗಳನ್ನು ಒದಗಿಸುವುದರೊಂದಿಗೆ ಅಗತ್ಯವಿರುವ ಎಲ್ಲಾ ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

--6

06. ಚುನಾವಣಾಧಿಕಾರಿಗಳು ರಿರ್ಟನಿಂಗ್ ಅಧಿಕಾರಿಗಳ ನೇಮಕಾತಿ ಆದೇಶ ಪ್ರಾಧಿಕಾರದಿಂದ ಸ್ವೀಕೃತವಾದ ಕೂಡಲೆ ಸಂಬಂಧಪಟ್ಟ ರಿರ್ಟನಿಂಗ್ ಆಫೀಸರ್‌ಗಳನ್ನು ಸಂಪರ್ಕಿಸಿ ಆದೇಶದ ಪ್ರತಿಗಳು ತಲುಪಿರುವ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಈ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

07. ಚುನಾವಣಾಧಿಕಾರಿಯು ನಿಯಮ 14ರ ರೀತ್ಯಾ ಚುನಾವಣೆ ಸಂಬಂಧ ನಮೂನೆ-XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.

08. ಆ ನಂತರ ರಿರ್ಟನಿಂಗ್ ಅಧಿಕಾರಿಯು ಉದ್ದೇಶಿತ ಚುನಾವಣೆ ಸಂಬಂಧ ನಮೂನೆ-XII ರಲ್ಲಿ 'ನಿಯಮ-14(3)'ರ ಚುನಾವಣಾ ನೋಟೀಸ್ ನೀಡುವ ಕುರಿತು ಚುನಾವಣಾಧಿಕಾರಿ ನಿಗಾವಹಿಸತಕ್ಕದ್ದು ಮತ್ತು ಖಾತರಿ ಪಡಿಸಿಕೊಳ್ಳತಕ್ಕದ್ದು.

09. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಜಿಲ್ಲೆಗಳಿಗೆ ಸಂಬಂಧಿಸಿದ ಸಂಘಗಳ / ಸಹಕಾರಿಗಳ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವಿಕೆ ಮತ್ತು ಪರಿಶೀಲನೆ, ಚುನಾವಣಾ ಸಿಬ್ಬಂದಿ, ಮತದಾನಕ್ಕೆ ಸೂಕ್ತ ಸ್ಥಳ ನಿಗದಿಪಡಿಸುವುದು, ಮತಕೇಂದ್ರಗಳ ಪರಿಶೀಲನೆ, ಮತಎಣಿಕೆ ವ್ಯವಸ್ಥೆ, ಚುನಾವಣಾ ಸಾಮಗ್ರಿಗಳ ವ್ಯವಸ್ಥೆ, ಚುನಾವಣಾ ಕೆಲಸ ಕಾರ್ಯಗಳ ಉಸ್ತುವಾರಿ ಕುರಿತಂತೆ ಚುನಾವಣೆಗೆ ಪೂರ್ವದಲ್ಲಿ ಪ್ರಾಧಿಕಾರದಿಂದ ಫೆಡರಲ್ ಸಂಘಗಳಿಗೆ ನೇಮಕಗೊಂಡ ಚುನಾವಣಾಧಿಕಾರಿಗಳಿಗೆ ಅಗತ್ಯ ಸಹಕಾರ ನೀಡತಕ್ಕದ್ದು.

10. ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸುವ/ಮತದಾರರ ಪಟ್ಟಿ ತಯಾರಿಸುವ ಸಂಬಂಧ ಸಹಕಾರ ಸಂಘಗಳ/ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು/ಆಡಳಿತ ಮಂಡಲಿಗಳು ಸಹಕಾರ ಸಂಘಗಳ/ಸಹಕಾರಿಗಳ ಅಧಿನಿಯಮ/ನಿಯಮಗಳ ಅವಕಾಶಗಳಂತೆ ಚುನಾವಣಾಧಿಕಾರಿಗಳ ನಿರ್ದೇಶನಗಳನ್ವಯ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸಹಕಾರ ಸಂಘಗಳ ಅಧಿನಿಯಮ/ನಿಯಮಗಳ ಅವಕಾಶಗಳಂತೆ ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳು/ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಿ ಅಧಿಸೂಚನೆಯನ್ನು ಹೊರಡಿಸಿದೆ. ಸಂಬಂಧಿಸಿದ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸುವ ಸಂಬಂಧ ಸಹಕಾರ ಸಂಘಗಳ ಅಧಿನಿಯಮ/ನಿಯಮಗಳು/ಬೈಲಾಗಳಿಗೆ ಅನುಗುಣವಾಗಿ ಸರಿಯಾದ ಮತದಾರರ ಪಟ್ಟಿಯನ್ನು ತಯಾರಿಸಲು ಮತ್ತು ಚುನಾವಣೆಗಳನ್ನು ನಿಯಮಾನುಸಾರ, ಪಾರದರ್ಶಕವಾಗಿ/ಸುಗಮವಾಗಿ ನಡೆಸುವ ಬಗ್ಗೆ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗಳು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಚುನಾವಣಾಧಿಕಾರಿಗಳು/ರಿರ್ಟನಿಂಗ್ ಆಫೀಸರ್‌ಗಳಿಗೆ ನಿಯಮಾನುಸಾರ ಅಗತ್ಯ ದಾಖಲೆಗಳನ್ನು ಒದಗಿಸುವ ಮುಖಾಂತರ ಎಲ್ಲಾ ರೀತಿಯ ಅಗತ್ಯ ನೆರವು ನೀಡತಕ್ಕದ್ದಾಗಿದೆ.

(ಎನ್.ಸಿ. ಮುನಿಯಪ್ಪ)
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು

## ಅನುಬಂಧ-2 (ಚೆಕ್‌ಲಿಸ್ಟ್)

**ಪದಾವಧಿಯು ಮುಗಿಯಲಿರುವ ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ ಚೆಕ್‌ಲಿಸ್ಟ್.**

ಸಂಖ್ಯೆ: ಸಚುಪ್ರಾ/ಆಡಳಿತ/ಚುನಾವಣೆ/07/2016 ದಿನಾಂಕ: **16.01.2016**

| ಕ್ರಮ ಸಂಖ್ಯೆ | ವಿವರ | ಷರಾ |
|---|---|---|
| 01 | ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸುವುದು. | 01. ಮಾಧ್ಯಮಿಕ: ದಿನಾಂಕ 30.05.2016 ಮತ್ತು 31.05.2016<br>02. ಫೆಡರಲ್: ದಿನಾಂಕ 30.07.2016 ಮತ್ತು 31.07.2016<br>03. ಅಪೆಕ್ಸ್: ದಿನಾಂಕ 28.09.2016 ಮತ್ತು 29.09.2016<br>ಈ ಮೇಲ್ಕಂಡ ದಿನಾಂಕಗಳಲ್ಲಿ ಆಯಾಯ ಹಂತದ ಚುನಾವಣಾಧಿಕಾರಿಗಳು ಸೂಕ್ತವೆನಿಸುವ ಯಾವುದೇ ದಿನಾಂಕದಲ್ಲಿ ಚುನಾವಣೆಯನ್ನು ನಿಗಧಿಪಡಿಸತಕ್ಕದ್ದು. |
| 02 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘದ/ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಆಯಾಯ ಹಂತದ ಚುನಾವಣಾಧಿಕಾರಿಗಳಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿ(4) ಮತ್ತು (5) ಹಾಗೂ ಸೌಹಾರ್ದ ಸಹಕಾರಿ ನಿಯಮ 5ಬಿ(1) ಮತ್ತು (2)ರಂತೆ] | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 60 ದಿನಗಳ ಮುಂಚೆ ಆಯಾಯ ಹಂತದ ಚುನಾವಣಾಧಿಕಾರಿಗಳಿಗೆ ಸಹಕಾರ ಸಂಘದ/ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |
| 03 | ಮೇಲೆ ನಮೂದಿಸಲಾದ ಕಂಡಿಕೆ(2)ರಲ್ಲಿ ವಿವರಿಸಿ ರುವಂತೆ ಕರಡು ಮತದಾರರ ಮತ್ತು ಡೆಲಿಗೇಟ್‌ಗಳ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಚುನಾವಣಾಧಿಕಾರಿಯು (ಇ.ಓ) ಪ್ರಕಟಿಸಬೇಕಾಗಿರುತ್ತದೆ.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ-13ಡಿ(3)(ಎ) ಮತ್ತು ಸೌಹಾರ್ದ ನಿಯಮ-5(ಬಿ) ಗಳನ್ವಯ] | ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚೆ ಚುನಾವಣಾಧಿಕಾರಿಗಳಿಂದ ಪ್ರಕಟಿಸತಕ್ಕದ್ದು. |
| 4 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು.<br>[ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ-13ಡಿ(3)(ಬಿ) ಮತ್ತು ಸೌಹಾರ್ದ ಸಹಕಾರಿ ನಿಯಮ-5ಬಿ(6)]. ಅಂತಿಮ ಮತದಾರರ ಪಟ್ಟಿಯು ಮಾಧ್ಯಮಿಕ ಸಹಕಾರ ಸಂಘದ/ಸಹಕಾರಿಗಳ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಂಘಗಳ ಡೆಲಿಗೇಟ್‌ಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. | ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಚುನಾವಣಾಧಿಕಾರಿಗಳಿಂದ ಪ್ರಕಟಿಸತಕ್ಕದ್ದು. |

| | | |
|---|---|---|
| 5 | ಸಹಕಾರ ಚುನಾವಣಾ ಪ್ರಾಧಿಕಾರವು ಮಾಧ್ಯಮಿಕ, ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳಿಗೆ/ಸಹಕಾರಿಗಳಿಗೆ ಚುನಾವಣೆ ನಡೆಸಲು ನಿಗದಿಪಡಿಸಿರುವ ಅಧಿಸೂಚನೆಯಂತೆ ನಿಯಮ-14ರನ್ವಯ ಚುನಾವಣಾಧಿಕಾರಿಯು ನಮೂನೆ-XI ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು. | ಚುನಾವಣಾಧಿಕಾರಿಗಳಿಂದ ಕರ್ನಾಟಕ ಸಹಕಾರ ಸಂಘಗಳ ನಿಯಮ 14 ಮತ್ತು ಸೌಹಾರ್ದ ಸಹಕಾರಿ ನಿಯಮ 5-ಇ ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 6 | ಕಂಡಿಕೆ-5 ರಲ್ಲಿ ವಿವರಿಸಿದಂತೆ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ-XIIರಲ್ಲಿ ಸಾರ್ವಜನಿಕ ನೋಟೀಸ್ ನೀಡತಕ್ಕದ್ದು. | ಕರ್ನಾಟಕ ಸಹಕಾರ ಸಂಘಗಳ ನಿಯಮ 14(3) ಮತ್ತು ಸೌಹಾರ್ದ ಸಹಕಾರಿ ನಿಯಮ 5ಇ(3)ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 7 | ಆಕಸ್ಮಿಕ ತೆರವಾದ ನಿರ್ದೇಶಕರ / ಪದಾಧಿಕಾರಿಗಳ ಚುನಾವಣೆ. | ಇಂತಹ ಪ್ರಕರಣಗಳಿದ್ದಲ್ಲಿ ಸಕ್ಷಮ ಚುನಾವಣಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿಗೆ ಪ್ರಾಧಿಕಾರಕ್ಕೆ ಸೂಕ್ತ ಪ್ರಸ್ತಾವೆ ಸಲ್ಲಿಸಿ ಆದೇಶ ಪಡೆದು ಚುನಾವಣೆ ನಡೆಸಲು ಅಗತ್ಯ ಕ್ರಮಕೈಗೊಳ್ಳುವುದು. |
| 8 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು. | ರಿಟರ್ನಿಂಗ್ ಅಧಿಕಾರಿಯು ಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |
| 9 | ಮತದಾನ ಮತಗಟ್ಟೆ ಅಧಿಕಾರಿ / ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ 13(ಎಫ್) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 5-ಡಿ ರ ಅವಕಾಶದಂತೆ ರಿಟರ್ನಿಂಗ್ ಅಧಿಕಾರಿಯು ಪ್ರತಿ ಮತದಾನ ಕೇಂದ್ರಕ್ಕೆ ಅವಶ್ಯವಿರುವ ಪ್ರಿಸೈಡಿಂಗ್ ಅಧಿಕಾರಿಗಳನ್ನು / ಚುನಾವಣಾ ಸಿಬ್ಬಂದಿಗಳನ್ನು ನೇಮಕ ಮಾಡಬಹುದು. |
| 10 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ ಮಾಡುವುದು. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು / ಬೈಲಾ ಅವಕಾಶಗಳ ಸಂಬಂಧ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಚುನಾವಣಾಧಿಕಾರಿ ಅಗತ್ಯ ವ್ಯವಸ್ಥೆ ಮಾಡುವುದು. |
| 11 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿ / ದಾಖಲೆಗಳನ್ನು ಸಲ್ಲಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮ 14ವೈ(2) ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 5ಎಡಿ ರನ್ವಯ ರಿಟರ್ನಿಂಗ್ ಅಧಿಕಾರಿ ಕ್ರಮವಿಡುವ ಕುರಿತು ಸೂಚಿಸುವುದು. |
| 12 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ ಹಾಗೂ ವಿಲೇವಾರಿಯ ಬಗ್ಗೆ ಕ್ರಮವಿಡುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಬಿ ಯಿಂದ 14ಎಡಿ ವರೆಗೆ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 5ಎಜಿ ಯಿಂದ 5ಎಐ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಪ್ರಾಧಿಕಾರವು ನಿರ್ದೇಶಿಸಿರುವಂತೆ ಕ್ರಮವಿಡುವುದು. |
| 13 | ಪದಾಧಿಕಾರಿಗಳ ಚುನಾವಣೆ ಬಗ್ಗೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಜಿ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ-6ರ ಅವಕಾಶದಂತೆ ಕ್ರಮವಿಡುವುದು. |
| 14 | ಮಾದರಿ ನೀತಿ ಸಂಹಿತೆ. | ಪ್ರಾಧಿಕಾರದಿಂದ ಈಗಾಗಲೇ ಹೊರಡಿಸಿರುವ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013-14 ದಿನಾಂಕ 03-08-2013ರ ರೀತ್ಯಾ ಕ್ರಮವಿಡುವುದು. |

(ಎನ್.ಸಿ. ಮುನಿಯಪ್ಪ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.